ನಂತರ ಬಂದಿದ್ದು. ತಮ್ಮಲ್ಲಿರುವ ಸಾಸಿವೆ, ಸಕ್ಕರೆ, ಉಪ್ಪುಗಳಿಗೆ ಹತ್ತಿ, ಮಸಾಲೆ, ಲೋಹ, ಸಾಂಬಾರು ಪದಾರ್ಥಗಳನ್ನು ವಿನಿಮಯ ಮಾಡಿಕೊಂಡು ಜೀವನ ನಡೆಸುತ್ತಿದ್ದರಷ್ಟೆ. ಆದರೆ ಈ ಜಗತ್ತು ಎಷ್ಟೇ ಮುಂದುವರಿದಿದ್ದರೂ ಈ ಬಾರ್ಟರ್ ಪದ್ಧತಿಯನ್ನು ಬಿಡಲಾಗಲಿಲ್ಲವೆಂಬುದು ನಿತ್ಯಸತ್ಯ. ಹೇಗೆಂದು ಕೇಳಿದಿರಾ?

ಒಂದು ಅಂಗಡಿಯಲ್ಲಿ/ಊರಿನಲ್ಲಿ ಎಕ್ಸ್‌ಚೇಂಜ್ ಆಫರ್ ಇದೆ ಎಂದರೆ ಸಾಕು ಟೀವಿ, ವಾಷಿಂಗ್ ಮೆಶೀನು, ಫ್ರಿಜ್ಜು, ಫೋನು, ಸ್ಟೌ, ತವಾಗಳು, ಕುಕ್ಕರುಗಳು, ಸೋಫಾ, ಟೇಬಲ್ಲುಗಳು ಎಂದು ಮನೆಯ ಸಂದುಮೂಲೆಯಲ್ಲಿರುವ ಎಲ್ಲ ಸಾಮಾನುಗಳನ್ನು ಗಂಟುಮೂಟೆ ಕಟ್ಟಿ ಅದನ್ನು ಬದಲಾಯಿಸಲು ದೌಡಾಯಿಸುವವರೇ. ನಿಜವಾಗಿ ಇದನ್ನು ಎಕ್ಸ್‌ಚೇಂಜ್ ಎನ್ನುವುದಕ್ಕಿಂತ ಹಳೆ ಸಾಮಾನುಗಳ ವಿಲೇವಾರಿ ಅನ್ನಬಹುದು. ಈಗೀಗಂತೂ ದೊಡ್ಡ ಮಾಲುಗಳೂ 'ಹಳೆಯ ಸಾಮಾನು, ಪೇಪರುಗಳನ್ನು ಕೊಳ್ಳುತ್ತೇವೆ, ರದ್ದಿ ಅಂಗಡಿಗಿಂತ ಜಾಸ್ತಿ ಹಣ ಕೊಡುತ್ತೇವೆ' ಎಂದು ಆಮಿಷ ಒಡ್ಡಿ ರದ್ದಿ ಅಂಗಡಿಯವರ ಶಾಪಕ್ಕೆ ಒಳಗಾಗಿವೆ.

ಹಳೆಯ ಸಾಮಾನುಗಳ ಬದಲಿಗೆ ಏನು ಬೇಕಾದರೂ ಕೊಂಡುಕೊಳ್ಳಿ ಎಂಬ ಆಸೆ ಹುಟ್ಟಿಸಿದರೂ ಸಣ್ಣ ಅಕ್ಷರಗಳಲ್ಲಿ ಷರತ್ತುಗಳನ್ನು (T&C APPLYಯನ್ನು) ಯಾರಿಗೂ ಕಾಣದಂತೆ ಅಚ್ಚುಮಾಡಿರುತ್ತವೆ. ಚೋದ್ಯವೆಂದರೆ, ಅವು ಎಷ್ಟೇ ಒಳ್ಳೆಯ ಕಂಡೀಶನ್‌ನಲ್ಲಿದ್ದರೂ ಕೊಳ್ಳುವಾತ ಅದಕ್ಕೆ ಐನೂರು ರೂಪಾಯಿಗಿಂತ ಜಾಸ್ತಿ ಕೊಟ್ಟರೆ ಅದೇ ದೊಡ್ಡದು. ನಂತರ ಡೋರ್ ಡೆಲಿವರಿ ಮಾಡುವ ಹುಡುಗರಿಗೆ ಇನ್ನೂರು ಮುನ್ನೂರು ಕೊಟ್ಟರೆ ಉಳಿಯುವುದೆಷ್ಟು?

'ನಿಮ್ಮ ಹಳೆ ಚಿನ್ನವನ್ನು ಹೊಸ ಚಿನ್ನಕ್ಕೆ ಬದಲಾಯಿಸಿಕೊಳ್ಳಿ' ಎಂಬ ಜಾಹೀರಾತಿಗೆ ಮರುಳಾದರೆ ಮೇಕಿಂಗ್ ಚಾರ್ಜು, ವೇಸ್ಟೇಜು ಎಂಬ ಇತರ ಹಿಡನ್ ಚಾರ್ಜುಗಳಲ್ಲಿ ನಮ್ಮ ಹಳೆಯ ಚಿನ್ನಕ್ಕೆ ಅರ್ಧ ಬೆಲೆ ಬಂದರೆ ಜಾಸ್ತಿ. ಹೀಗಾಗಿ ಎಕ್ಸ್‌ಚೇಂಜ್ ಎನ್ನುವುದು ಜನರ ಕಣ್ಣಿಗೆ ಮಣ್ಣೆರಚುವ ಪ್ರಕ್ರಿಯೆ ಅಷ್ಟೇ! ನಮ್ಮ ಲಾಭಕ್ಕಂತೂ ಯಾರೂ ಅಂಗಡಿ ತೆರೆದಿರುವುದಲ್ಲವಲ್ಲ?



ನಿಶ್ಚಿತಾರ್ಥಗಳಲ್ಲಿ ಸಂಬಂಧ ಬೆಸೆಯಬೇಕಾದರೆ ಹಿರಿಯರು ತಾಂಬೂಲದ ವಿನಿಮಯ ಮಾಡಿಕೊಂಡರೆ ಮಾತ್ರ ಅದಕ್ಕೊಂದು ಗ್ಯಾರಂಟಿ/ವಾರಂಟಿ. ಜೊತೆಗೆ ಗಂಡು ಹೆಣ್ಣಿನ ಉಂಗುರ ವಿನಿಮಯ. ಮದುವೆಯಲ್ಲಿ ಹಾರಗಳ ಬದಲಾವಣೆ ಮಾಡಿಕೊಂಡರೆ ಮಾತ್ರ ಜನ್ಮಜನ್ಮಗಳ ಅನುಬಂಧ ಬೆಸೆಯಲು ಮುದ್ರೆ ಬೀಳುವುದು.

ಆಸ್ಪತ್ರೆಗಳಲ್ಲಿ ಕೆಲವೊಮ್ಮೆ ದಾದಿಯರು ಮಗುವನ್ನು ಅದಲು ಬದಲಾಯಿಸುವುದುಂಟಂತೆ. ಇದು ಕಲಿಯುಗದಲ್ಲಿ ಮಾತ್ರವಲ್ಲ, ಮೊದಲೂ ಇತ್ತು; ಕೃಷ್ಣ ಹುಟ್ಟಿದಾಗ ವಾಸುದೇವ ಅವನನ್ನು ನಂದಗೋಕುಲದಲ್ಲಿ ಬಿಟ್ಟು ಮಾಯೆಯು ಶಿಶುವಾಗಿ ಅವನ ಜಾಗದಲ್ಲಿ ಬಂದಿತಲ್ಲವೇ? ಹೀಗಾಗಿ ಮಕ್ಕಳ ಅದಲು ಬದಲು ಎನ್ನುವುದು ದ್ವಾಪರಯುಗದಿಂದಲೂ ಇತ್ತು ಎಂದುಕೊಳ್ಳಬಹುದು.

ಪಾಂಡವರ ಪೂರ್ವಜನಾದ ಯಯಾತಿ ತನಗೆ ಬಂದ ವೃದ್ಧಾಪ್ಯದ ಶಾಪವನ್ನು ಒಪ್ಪಿಕೊಳ್ಳಲಾಗದೆ ಕೊನೆಗೆ ಮಗ ಪುರುವಿನ ಯೌವನದೊಡನೆ ವಿನಿಮಯ ಮಾಡಿಕೊಳ್ಳುತ್ತಾನೆ. ಕೊನೆಯಲ್ಲಿ ಅವನಿಗೆ ಪ್ರಾಯಶ್ಚಿತ್ತ ಉಂಟಾಗಿ ಪುರುವಿನ ಯೌವನ ಹಿಂದಿರುಗಿಸುತ್ತಾನೆ.

ಕೆಲವೊಮ್ಮೆ ವಿನಿಮಯವೆನ್ನುವುದು ನಿರೀಕ್ಷೆಗಳನ್ನು ಹುಟ್ಟುಹಾಕಿಸಿಬಿಡುತ್ತದೆ. ಪಡೆದ ಅಥವಾ ಮಾಡಿದ ಸಹಾಯ, ಕಮಿಟ್‌ಮೆಂಟುಗಳು, ದೋಸ್ತಿಗಳ ನಡುವೆ ಗಿಫ್ಟುಗಳ ಬದಲಾವಣೆಗಳಲ್ಲಿ ನಿರೀಕ್ಷೆ ಬಾನಗಲ ಇರಬಹುದು. ಈ ವಿನಿಮಯ ಒಮ್ಮೊಮ್ಮೆ ಬ್ಲಾಕ್‌ಮೇಲ್ ತಂತ್ರವಾಗಿಯೂ ಕೆಲಸ ಮಾಡುತ್ತದೆ. ಮುಖ್ಯವಾಗಿ ಪುಟ್ಟಮಕ್ಕಳಿಗೆ 'ನೀನು ಓದಿದರೆ ಚಾಕೊಲೇಟು, ಬಹುಮಾನ ಬಂದ್ರೆ ಸೈಕಲ್ಲು' ಎಂದು ಹೇಳಿ ಕೊಡುಕೊಳ್ಳುವಿಕೆಗೆ ಲೈಸೆನ್ಸ್ ಕೊಟ್ಟ ತಪ್ಪಿಗೆ ಟಿಟ್ ಫಾರ್ ಟ್ಯಾಟ್ ಎನ್ನುವಂತೆ. ಈಗಿನ ಮಕ್ಕಳೂ 'ತಿಂಡಿ ತಿನ್ನಬೇಕಾದರೆ ಮೊಬೈಲು ಕೊಡು' ಎಂದು ರಂಗೋಲಿಯ ಅಡಿ ನುಸುಳುತ್ತಾರೆ.

ಪ್ರಯಾಣ ಕಾಲದಲ್ಲಿ ಆಗುವ ಚೀಲಗಳ ವಿನಿಮಯ ರೋಚಕ. ಅದಕ್ಕಾಗಿ ಸಮಯ, ಹಣ ವ್ಯರ್ಥವಾಗುವುದು ತಲೆನೋವು. ಈಗೀಗ ಒಂದೇ ಬ್ರ್ಯಾಂಡಿನ ಒಂದೇ ಬಣ್ಣದ ಬ್ಯಾಗುಗಳು, ಸೂಟ್‌ಕೇಸುಗಳು ಇರುವುದರಿಂದ ಅದಲುಬದಲು ಸರ್ವೇಸಾಮಾನ್ಯ, ಅದಕ್ಕಾಗಿ ಮಾಡುವ ಜಗಳ, ಪಡುವ ಆತಂಕ ಒಂದೆರಡಲ್ಲ.

ಸಿನಿಮಾಗಳಲ್ಲಿ ಕಿಡ್ನಾಪ್ ಆದ ಮಗುವನ್ನೋ, ನಾಯಕಿಯನ್ನೋ ವಾಪಸು ಕೊಡಬೇಕಾದರೆ ಇಂತಿಷ್ಟು ಸೂಟ್‌ಕೇಸು ಹಣ ಕೊಡಬೇಕೆಂದು ತಾಕೀತು ಮಾಡಿರುತ್ತಾರೆ. ಕ್ಲೈಮ್ಯಾಕ್ಸಿನಲ್ಲಿ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ವಿನಿಮಯವಾಗುವಾಗ ಡಗ್‌ಡಗ್ ಎಂಬ ಹಿನ್ನೆಲೆಗೆ ಎದೆಬಡಿತ ಹೆಚ್ಚಿಸಿಕೊಂಡಿರುವವರಲ್ಲಿ ನೀವೂ ಇರಬಹುದು.

ಶಾಲೆಗೆ ಹೋಗುವಾಗ 'ಅದಲು ಬದಲು ಕಂಚಿಕದಲು' ಎಂಬ ಆಟ ಆಡಿದ ನೆನಪಿರಬಹುದು. ಹಾಗೆಯೇ ಪದಗಳನ್ನು ಅದಲು ಬದಲು ಮಾಡಿ ಹೊಸಪದ ಸೃಷ್ಟಿಸುವ ಗಮ್ಮತ್ತಿನ ಆಟವನ್ನು ಅಧ್ಯಾಪಕರು ಆಗಾಗ ಮಾಡಿಸುತ್ತಿದ್ದರು. 'ನಕಲಿ ಕದ'ವನ್ನು ಅದಲು ಬದಲು ಮಾಡಿದರೆ 'ಕದನ ಕಲಿ' ಎಂಬ ಹೊಸಪದ ಮಾಡುತ್ತಿದ್ದೆವು. ಇಂಗ್ಲಿಷಿನಲ್ಲಿ ಇದಕ್ಕೆ 'ಸ್ಪೂನರಿಸಮ್' ಎನ್ನುತ್ತಾರೆಂದು ಇತ್ತೀಚೆಗೆ ಗೊತ್ತಾಯಿತು.

ಈ ವಿನಿಮಯದ ಕುರಿತಾದ ಒಂದು ಕತೆಯೊಂದಿಗೆ ಬರಹ ಮುಗಿಸುತ್ತೇನೆ. ಒಮ್ಮೆ ಜನರೆಲ್ಲರೂ ದೇವರಿಗೆ 'ದೇವರೇ, ನನಗೆ ಮಾತ್ರ ಅತಿಯಾದ ಕಷ್ಟಗಳನ್ನು ಕೊಡುತ್ತಿದ್ದೀ. ಉಳಿದವರೆಲ್ಲರೂ ಸಂತೋಷವಾಗಿದ್ದಾರೆ, ಈ ಕಷ್ಟಗಳನ್ನೆಲ್ಲ ಪರಿಹರಿಸು' ಎಂದು ಮೊರೆಯಿಟ್ಟರು. ಅದಕ್ಕೆ ದೇವರು 'ಹಾಗಾದರೆ ನಿಮ್ಮನಿಮ್ಮ ಕಷ್ಟಗಳನ್ನೆಲ್ಲ ಬರೆದು ಒಂದು ಡಬ್ಬಿಯಲ್ಲಿ ಹಾಕಿ. ಪರಿಹರಿಸುತ್ತೇನೆ' ಎಂದನು. ಅದರಂತೆ ಜನರೆಲ್ಲರೂ ತಮ್ಮ ಕಷ್ಟಗಳನ್ನು ಬರೆದು ಡಬ್ಬಿಯಲ್ಲಿ ಹಾಕಿದರು. ದೇವರು 'ಈಗ ಒಬ್ಬೊಬ್ಬರಾಗಿ ಬಂದು ಒಂದೊಂದು ಚೀಟಿಯನ್ನು ಆರಿಸಿ ಅದರಲ್ಲಿ ಏನು ಬರೆದಿದೆಯೋ ಅದು ನಿಮಗೆ' ಎಂದನು. 'ನಮ್ಮ ಕಷ್ಟಗಳೆಲ್ಲ ಇಂದಿಗೆ ತೀರಿತು. ನಮಗಿರುವ ಕಷ್ಟಗಳ ಮುಂದೆ ಇದೇನೂ ಅಲ್ಲ' ಎಂದು ಖುಷಿಯಿಂದ ಚೀಟಿ ತೆಗೆದು ಓದಿದರು. ಆದರೆ ಓದಿದ ಮೇಲೆ ಎಲ್ಲರಿಗೂ ಇದರಲ್ಲಿರುವ ಕಷ್ಟಕ್ಕಿಂತ ನಮಗಿರುವ ಕಷ್ಟಗಳೇ ಎಷ್ಟೋ ವಾಸಿಯೆಂದು ಅರಿತು ತಮ್ಮ ಮೂಲ ಚೀಟಿಗಳನ್ನು ಮತ್ತೆ ಆರಿಸಿಕೊಂಡರಂತೆ.

'ಗಟ್ಟಿಮೇಳ' ಸಿನಿಮಾದಲ್ಲಿ ನಟಿ ಶ್ರುತಿ 'ನವಿಲೇನೋ ಕುಣಿಬೇಕು, ಕೋಗಿಲೆಯೂ ಹಾಡಬೇಕು, ಅದಲಿ ಬದಲಿ ಆಗೋದ್ರೆ ಕಲ್ಲಿನ ಕೋಳಿ ಕೂಗುತ್ತೈತೋ ಲೋಕಕೆ ಪ್ರಳಯ ಆಗುತ್ತೈತೋ' ಎಂದು ಹಾಡಿದ್ದು ನೆನಪಿರಬಹುದು. ಒಂದು ಜೊತೆ ಸಾಕ್ಸೋ ಅಥವಾ ಕಿವಿಯ ಓಲೆಯೊಂದಿಗೋ ಬೇರೆಯದನ್ನು ಹಾಕಿಕೊಳ್ಳಲಾಗುವುದಿಲ್ಲವಷ್ಟೇ. ಅದಕ್ಕೆ ಅದರದ್ದೇ ಜೊತೆಯಾಗಬೇಕು. ಹೀಗಾಗಿ ಎಲ್ಲಾ ಸಂದರ್ಭಗಳಲ್ಲಿ ಲೋಕಾರೂಢಿ ಅದಲು ಬದಲಾಯಿಸಲು ಸಾಧ್ಯವಿಲ್ಲ. ಅಲ್ಲವೇ?

**ಪ್ರತಿಕ್ರಿಯಿಸಿ: feedback@sudha.co.in**